# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2005–06ನೇ ಶೈಕ್ಷಣಿಕ ಸಾಲಿನಿಂದ ರಾಯಚೂರಿನ ವಿವೇಕಾನಂದ ರೂರಲ್ ಎಜುಕೇಷನ್ ಟ್ರಸ್ಟ್‌ನ ದೈಹಿಕ ಶಿಕ್ಷಣ (ಬಿ.ಪಿ.ಎಡ್) ಕಾಲೇಜಿಗೆ ಸಂಯೋಜನೆ.

ಓದಲಾಗಿದೆ: (1) ದಿನಾಂಕ:21–02–2004, ಸಂಖ್ಯೆ: ಇಡಿ 35 ಯುಜಿವಿ 2004ರ ಸರ್ಕಾರಿ ಆದೇಶ

(2) ದಿನಾಂಕ: 17–02–2006, ಸಂಖ್ಯೆ: F.SRO/NCTE/B.P.Ed/2005-06/5489 ರ ಎನ್.ಸಿ.ಟಿ.ಇ ಯ ದಕ್ಷಿಣ ಪ್ರಾದೇಶಿಕ ಸಮಿತಿಯ ಆದೇಶ.

(3) ದಿನಾಂಕ: 24–04–2006ರ ಸಂಖ್ಯೆ: ವಿಆರ್‌ಇಟಿ/ಬಿ.ಪಿ.ಎಡ್/159, ವಿವೇಕಾನಂದ ರೂರಲ್ ಎಜುಕೇಷನ್ ಟ್ರಸ್ಟ್‌ನ ಕಾರ್ಯದರ್ಶಿಯವರ ಪತ್ರ

*****

***ಪೀಠಿಕೆ:-***

1) ಸರ್ಕಾರಿ/ವಿಶ್ವವಿದ್ಯಾಲಯ/ಅನುದಾನಿತ/ಖಾಸಗಿ ಶಿಕ್ಷಣ ಕಾಲೇಜುಗಳಲ್ಲಿ ನಡೆಸಲಾಗುತ್ತಿರುವ ಬಿ.ಎಡ್./ಬಿ.ಪಿ.ಎಡ್. ಕೋರ್ಸಿನ ವಿದ್ಯಾರ್ಥಿ ಪ್ರಮಾಣವನ್ನು ಪ್ರತಿ ಶೈಕ್ಷಣಿಕ ವರ್ಷಕ್ಕೆ ಅನ್ವಯವಾಗುವಂತೆ 1993ರ ಎನ್.ಸಿ.ಟಿ.ಇ, ಯ ಅಧಿನಿಯಮದ 14ನೇ ಪ್ರಕರಣದಡಿ ಎನ್.ಸಿ.ಟಿ.ಇ. ಯು ಮಂಜೂರು ಮಾಡುವ ವಿದ್ಯಾರ್ಥಿ ಪ್ರಮಾಣವನ್ನು 2000ರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮದ 59 (18)ನೇ ಪ್ರಕರಣದಡಿ ಓದಲಾದ ಕಾಲಕಾಲಕ್ಕೆ ತಿದ್ದುಪಡಿಯಾದ 1999ರ ಬಿ.ಎಡ್. ಮತ್ತು ಟಿ.ಸಿ.ಹೆಚ್. ಕೋರ್ಸುಗಳ ಪ್ರವೇಶಕ್ಕೆ ಕರ್ನಾಟಕ ಅಭ್ಯರ್ಥಿಗಳ ಆಯ್ಕೆ ನಿಯಮಗಳ 2(1) (ಎ) ನ ನಿಯಮದಡಿ ಸರ್ಕಾರವು ನಿಗದಿಪಡಿಸುತ್ತಿದೆ.

2) ದಿನಾಂಕ:21-02–2004, ಸಂಖ್ಯೆ: ಇಡಿ 35 ಯುಜಿವಿ 2004ರ ಸರ್ಕಾರಿ ಆದೇಶದಲ್ಲಿ ರಾಯಚೂರಿನ ವಿವೇಕಾನಂದ ರೂರಲ್ ಎಜುಕೇಷನ್ ಟ್ರಸ್ಟ್ ರಾಯಚೂರಿನಲ್ಲಿ ಸ್ಥಾಪಿಸಲು ಉದ್ದೇಶಿಸಿದ್ದ ದೈಹಿಕ ಶಿಕ್ಷಣ ಕಾಲೇಜಿನಲ್ಲಿ ಬಿ.ಪಿ.ಎಡ್ ಕೋರ್ಸನ್ನು 40 (ನಲವತ್ತು ಮಾತ್ರ) ವಿದ್ಯಾರ್ಥಿ ಪ್ರಮಾಣದೊಂದಿಗೆ 2004–05ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲು ನಿರಾಕ್ಷೇಪಣಾ ಪತ್ರವನ್ನು ನೀಡಲಾಗಿತ್ತು. ದಿನಾಂಕ: 17–02–2006, ಸಂಖ್ಯೆ: F.SRO/NCTE/B.P.Ed/2005-06/5489ರ ಎನ್.ಸಿ.ಟಿ.ಇಯ ದಕ್ಷಿಣ ಪ್ರಾದೇಶಿಕ ಸಮಿತಿಯ ಆದೇಶದಲ್ಲಿ ಎನ್.ಸಿ.ಟಿ.ಇ.ಯು ಸದರಿ ಕಾಲೇಜಿನ ಬಿ.ಪಿ.ಎಡ್. ಕೋರ್ಸಿಗೆ 2005–06ನೇ ಶೈಕ್ಷಣಿಕ ಸಾಲಿನಿಂದ ಅನ್ವಯವಾಗುವಂತೆ 50 (ಐವತ್ತು ಮಾತ್ರ) ವಿದ್ಯಾರ್ಥಿ ಪ್ರಮಾಣದೊಂದಿಗೆ ಮಾನ್ಯತೆ ನೀಡಿದೆ. ದಿನಾಂಕ: 24–04–2006ರ ಸಂಖ್ಯೆ: ವಿಆರ್‌ಇಟಿ/ಬಿ.ಪಿ.ಎಡ್/159, ವಿವೇಕಾನಂದ ರೂರಲ್ ಎಜುಕೇಷನ್ ಟ್ರಸ್ಟ್‌ನ ಕಾರ್ಯದರ್ಶಿಯವರು ತಮ್ಮ ಕಾಲೇಜಿನಲ್ಲಿ ಬಿ.ಪಿ.ಎಡ್ ಕೋರ್ಸನ್ನು ಪ್ರಾರಂಭಿಸಲು ಮಂಜೂರಾತಿಯನ್ನು ನೀಡುವಂತೆ ಕೋರಿರುತ್ತಾರೆ. ಅದಕ್ಕಾಗಿ, ಈ ಕೆಳಕಂಡ ಆದೇಶ.

## ಸರ್ಕಾರಿ ಆದೇಶ ಸಂಖ್ಯೆ: ಇಡಿ 55 ಯುಜಿವಿ 2006, ಬೆಂಗಳೂರು, ದಿನಾಂಕ:09–06–2006

3) 2000ರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮದ 59 ನೇ ಪ್ರಕರಣದ 18ನೇ ಉಪ ಪ್ರಕರಣದೊಂದಿಗೆ ಓದಲಾದ ಕಾಲಕಾಲಕ್ಕೆ ತಿದ್ದುಪಡಿಯಾದ 1999ರ ಬಿ.ಎಡ್. ಮತ್ತು

...2/-

ಟಿ.ಸಿ.ಹೆಚ್. ಕೋರ್ಸುಗಳ ಪ್ರವೇಶಕ್ಕೆ ಕರ್ನಾಟಕ ಅಭ್ಯರ್ಥಿಗಳ ಆಯ್ಕೆ ನಿಯಮಗಳ 2(1) (ಎ) ನ ನಿಯಮದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ರಾಯಚೂರಿನ ವಿವೇಕಾನಂದ ರೂರಲ್ ಎಜುಕೇಷನ್ ಟ್ರಸ್ಟ್‌ನ ದೈಹಿಕ ಶಿಕ್ಷಣ (ಬಿ.ಪಿ.ಎಡ್) ಕೋರ್ಸಿಗೆ 2005-06ನೇ ಶೈಕ್ಷಣಿಕ ಸಾಲಿನಿಂದ ಅನ್ವಯವಾಗುವಂತೆ 50 (ಐವತ್ತು) ವಿದ್ಯಾರ್ಥಿ ಪ್ರಮಾಣವನ್ನು ನಿಗಧಿಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

*(ಎಂ. ಟಿ. ಮಂಜುನಾಥ್)*
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ)

***ಇವರಿಗೆ:***

ಸಂಕಲನಾಧಿಕಾರಿ, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸಿ ಅದರ 100 ಪ್ರತಿಗಳನ್ನು ಒದಗಿಸಲು ಕೋರಿದೆ.

***ಪ್ರತಿ ಇವರಿಗೆ:***

(1) ಸಾರ್ವಜನಿಕ ಶಿಕ್ಷಣ ಆಯುಕ್ತರು, ಬೆಂಗಳೂರು-560 001
(2) ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶಕರು, ಸಂ: 4, 100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ, ಹೊಸಕೆರೆಹಳ್ಳಿ ಅಂಚೆ ಕಛೇರಿ ಹತ್ತಿರ, ಹೊಸಕೆರೆಹಳ್ಳಿ, ಬೆಂಗಳೂರು-560 085
(3) ಕುಲಸಚಿವರು, ಗುಲ್ಬರ್ಗಾ ವಿಶ್ವವಿದ್ಯಾಲಯ-585 106
(4) ಕಾರ್ಯದರ್ಶಿ, ವಿವೇಕಾನಂದ ರೂರಲ್ ಎಜುಕೇಷನ್ ಟ್ರಸ್ಟ್, ರೈಲ್ವೇ ನಿಲ್ದಾಣದ ಹತ್ತಿರ, ಹೊಸುರು ರಸ್ತೆ, ರಾಯಚೂರು-584 101
(5) ಪ್ರಾದೇಶಿಕ ನಿರ್ದೇಶಕರು, ಎಸ್.ಆರ್.ಸಿ. ಆಫ್. ಎನ್.ಸಿ.ಟಿ.ಇ., 1ನೇ ಮಹಡಿ ಸಿ.ಎಸ್.ಡಿ. ಬಿಲ್ಡಿಂಗ್ ಹೆಚ್.ಎಂ.ಟಿ. ಪೋಸ್ಟ್, ಬೆಂಗಳೂರು-560 031
(6) ವಿಶೇಷಾಧಿಕಾರಿ, ಕೇಂದ್ರಿಕೃತ ಪ್ರವೇಶ ಘಟಕ, ಕಾವೇರಿ ಭವನದ ಎದುರು, ಬೆಂಗಳೂರು-560 009
(7) ಶಾಖಾಧಿಕಾರಿ, ಶಿಕ್ಷಣ ಇಲಾಖೆ, (ವಿವಿ-2)
(8) ಹೆಚ್ಚಿನ ಪ್ರತಿ

# ಕರ್ನಾಟಕ ಸರ್ಕಾರ

**ಕ್ರಮಾಂಕ:** ಇಡಿ 55 ಯುಜಿವಿ 2006

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: 09-06-2006

**ಇಂದ:**
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ, (ಉನ್ನತ ಶಿಕ್ಷಣ)
ಕರ್ನಾಟಕ ಸರ್ಕಾರ,
**ಬೆಂಗಳೂರು-560 001.**

**ಇವರಿಗೆ:**
ಕುಲಸಚಿವರು,
ಗುಲ್ಬರ್ಗಾ ವಿಶ್ವವಿದ್ಯಾಲಯ,
**ಗುಲ್ಬರ್ಗಾ - 585 106**

ಮಾನ್ಯರೆ,

**ವಿಷಯ:** 2005–06ನೇ ಶೈಕ್ಷಣಿಕ ಸಾಲಿನಿಂದ ರಾಯಚೂರಿನ ವಿವೇಕಾನಂದ ರೂರಲ್ ಎಜುಕೇಷನ್ ಟ್ರಸ್ಟ್‌ನ ದೈಹಿಕ ಶಿಕ್ಷಣ ಕಾಲೇಜಿಗೆ ವಿದ್ಯಾರ್ಥಿ ಪ್ರಮಾಣ ನಿರ್ಧರಣೆ.

**ಉಲ್ಲೇಖ:** (1) ದಿನಾಂಕ:21–02–2004, ಸಂಖ್ಯೆ: ಇಡಿ 35 ಯುಜಿವಿ 2004ರ ಸರ್ಕಾರಿ ಆದೇಶ
(2) ದಿನಾಂಕ: 17–02–2006, ಸಂಖ್ಯೆ: F.SRO/NCTE/B.P.Ed/2005-06/5489 ರ ಎನ್.ಸಿ.ಟಿ.ಇ ಯ ದಕ್ಷಿಣ ಪ್ರಾದೇಶಿಕ ಸಮಿತಿಯ ಆದೇಶ.
(3) ದಿನಾಂಕ: 24–04–2006ರ ಸಂಖ್ಯೆ: ವಿಆರ್ಇಟಿ/ಬಿ.ಪಿ.ಎಡ್/159, ವಿವೇಕಾನಂದ ರೂರಲ್ ಎಜುಕೇಷನ್ ಟ್ರಸ್ಟ್‌ನ ಕಾರ್ಯದರ್ಶಿಯವರ ಪತ್ರ
(1) ಇದೇ ಸಮ ಸಂಖ್ಯೆಯ ದಿನಾಂಕ:09.06.2006ರ ಸರ್ಕಾರಿ ಆದೇಶ.

1) **ರಾಯಚೂರಿನ ವಿವೇಕಾನಂದ ರೂರಲ್ ಎಜುಕೇಷನ್ ಟ್ರಸ್ಟ್‌ನ ದೈಹಿಕ ಶಿಕ್ಷಣ** ಕಾಲೇಜಿನ ಸ್ಥಾಪನೆಗಾಗಿ/ಸಂಯೋಜನೆಗಾಗಿ ಗುಲ್ಬರ್ಗಾ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅರ್ಜಿಯನ್ನು ಸದರಿ ವಿಶ್ವವಿದ್ಯಾಲಯದ ಸ್ಥಳೀಯ ವಿಚಾರಣಾ ಸಮಿತಿಯು ನೀಡಿರುವ ವರದಿಯನ್ನಾಧರಿಸಿ, ಶೈಕ್ಷಣಿಕ ಪರಿಷತ್ತಿನ ಸಮಾಲೋಚನೆಯೊಂದಿಗೆ ಮತ್ತು ಸಿಂಡಿಕೇಟ್ ವಿಶ್ಲೇಷಿಸಿ ಮಾಡಿರುವ ಶಿಫಾರಸ್ಸು ಮತ್ತು ಎನ್‌ಸಿಟಿಇಯು ನೀಡಿರುವ ಮಾನ್ಯತೆಯನ್ನು ಆಧರಿಸಿ 2005-2006ನೇ ಶೈಕ್ಷಣಿಕ ಸಾಲಿನಿಂದ ಮೇಲ್ಕಂಡ ಕಾಲೇಜಿಗೆ ಸಂಯೋಜನೆ ಮಂಜೂರು ಮಾಡುವ ವಿಚಾರವನ್ನು ಸಂವೀಕ್ಷಿಸಲಾಗಿದೆ.

2) **ರಾಯಚೂರಿನ ವಿವೇಕಾನಂದ ರೂರಲ್ ಎಜುಕೇಷನ್ ಟ್ರಸ್ಟ್‌ನ ದೈಹಿಕ ಶಿಕ್ಷಣ** ಕಾಲೇಜನ್ನು ಶಾಶ್ವತ ಅನುದಾನ ರಹಿತ ಷರತ್ತಿಗೆ ಒಳಪಡಿಸಿ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ದ 59ನೇ ಪ್ರಕರಣದ (11)ನೇ ಉಪ ಪ್ರಕರಣದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಮೇಲ್ಕಂಡ ಕಾಲೇಜಿನಲ್ಲಿ B.P.Ed., **ಕೋರ್ಸನ್ನು 50 (ಐವತ್ತು)** ವಿದ್ಯಾರ್ಥಿ ಪ್ರಮಾಣದೊಂದಿಗೆ ಪ್ರಾರಂಭಿಸಲು, ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಸಂಯೋಜನೆಯನ್ನು ಮಂಜೂರು ಮಾಡುವಂತೆ ಶಿಫಾರಸ್ಸು ಮಾಡಲು ನಾನು ನಿರ್ದೇಶಿತನಾಗಿದ್ದೇನೆ.

**...ಮುಂದುವರೆದಿದೆ...**

SO UNI-1

ಷರತ್ತುಗಳು:-

(1) ಕಾಲೇಜುಗಳಿಗೆ ಅನ್ವಯವಾಗುವ ಅನುದಾನ ಸಂಹಿತೆಯಲ್ಲಿ ಯಾವುದೇ ಉಪಬಂಧಗಳಿದ್ದರೂ ಮೇಲ್ಕಂಡ ಶಿಕ್ಷಣ ಕಾಲೇಜಿಗೆ ಸರ್ಕಾರವು ಯಾವುದೇ ಅನುದಾನವನ್ನು ಮಂಜೂರು ಮಾಡುವುದಿಲ್ಲ. ಅದು ಶಾಶ್ವತ ಅನುದಾನರಹಿತ ಕಾಲೇಜೆಂದು ಪರಿಗಣಿಸತಕ್ಕದ್ದು;

(2) ಶಾಶ್ವತ ಅನುದಾನರಹಿತ ಷರತ್ತಿಗೆ ಒಳಪಡಲು ಕಾಲೇಜಿನಿಂದ ಮಧ್ಯಂತರ ಒಪ್ಪಂದ ಪತ್ರವನ್ನು ಮತ್ತು ಗೊತ್ತುವಳಿಯನ್ನು ವಿಶ್ವವಿದ್ಯಾಲಯವು ಪಡೆಯತಕ್ಕದ್ದು ಹಾಗೂ ವಿದ್ಯಾಸಂಸ್ಥೆಯು ಒಪ್ಪಂದದಲ್ಲಿನ ನಿಬಂಧನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು; ಒಪ್ಪಂದ ಪತ್ರದ ಒಂದು ಪ್ರತಿಯನ್ನು ಸರ್ಕಾರಕ್ಕೆ ಹಾಗೂ ಇನ್ನೊಂದು ಪ್ರತಿಯನ್ನು ಕಾಲೇಜು ಶಿಕ್ಷಣ ಪ್ರಾದೇಶಿಕ ಜಂಟಿ ನಿರ್ದೇಶಕರು, ಗುಲ್ಬರ್ಗಾ, ಇವರಿಗೆ ಕಳುಹಿಸತಕ್ಕದ್ದು;

(3) ಮೇಲ್ಕಂಡ ಕಾಲೇಜು ಎನ್‌ಸಿಟಿಇಯ ಅಧಿನಿಯಮ ಮತ್ತು ನಿಯಮಾವಳಿಗಳ ಉಪಬಂಧಗಳನ್ನು ತಪ್ಪದೇ ಪಾಲಿಸತಕ್ಕದ್ದು;

(4) ನಿಗದಿತ ವಿದ್ಯಾರ್ಥಿ ಪ್ರಮಾಣಕ್ಕಿಂತ ಹೆಚ್ಚುವರಿಯಾಗಿ ವಿದ್ಯಾರ್ಥಿಗಳ ಪ್ರವೇಶ ಮಾಡತಕ್ಕದ್ದಲ್ಲ;

(5) ಜಾರಿಯಲ್ಲಿರುವ ಸರ್ಕಾರದ ನಿಯಮಾವಳಿ, ಆದೇಶಗಳು ಹಾಗೂ ವಿಶ್ವವಿದ್ಯಾಲಯದ ಅನುಶಾಸನ, ಪರಿನಿಯಮಾವಳಿ ಇತ್ಯಾದಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು;

(6) ಸ್ಥಳೀಯ ವಿಚಾರಣಾ ಸಮಿತಿ ಹಾಗೂ ಎನ್‌ಸಿಟಿಇಯು ವಿಧಿಸಿರುವ ಪ್ರತಿಯೊಂದು ಷರತ್ತನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.

3) ಎಂಟು ದಿನಗಳೊಳಗಾಗಿ ಅಧಿಸೂಚನೆಯನ್ನು ಹೊರಡಿಸತಕ್ಕದ್ದು ಹಾಗೂ ಅದರ ಪ್ರತಿಯನ್ನು ತಕ್ಷಣ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ತಮ್ಮ ನಂಬುಗೆಯ,

(ಎಂ.ಪಿ.ಮಂಜುನಾಥ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ).

ಪ್ರತಿ ಇವರಿಗೆ:-

(1) ಕಾಲೇಜು ಶಿಕ್ಷಣ ಆಯುಕ್ತರು, ಬೆಂಗಳೂರು-560 001.
(2) ಕಾಲೇಜು ಶಿಕ್ಷಣ ನಿರ್ದೇಶಕರು, ಬೆಂಗಳೂರು-560 001.
(3) ಕಾಲೇಜು ಶಿಕ್ಷಣ ಪ್ರಾದೇಶಿಕ ಜಂಟಿ ನಿರ್ದೇಶಕರು, ಗುಲ್ಬರ್ಗಾ 585 106.
(4) ಕಾರ್ಯದರ್ಶಿ, ವಿವೇಕಾನಂದ ರೂರಲ್ ಎಜುಕೇಷನ್ ಟ್ರಸ್ಟ್, ರೈಲ್ವೇ ನಿಲ್ದಾಣದ ಹತ್ತಿರ, ಹೊಸುರು ರಸ್ತೆ ರಾಯಚೂರು-584 101